department should have think about it thousand times at the time of accepting it. ಇದನ್ನು ಏನು ಮಾಡಬೇಕು? ಈಗ ಏನಾಗಿದೆ ಎಂದರೆ, ಇವರನ್ನು ಅಲ್ಲಿಗೆ Transfer ಮಾಡುವ ಹಾಗಿಲ್ಲ ಅವರನ್ನು ಇಲ್ಲಿಗೆ transfer ಮಾಡುವ. Eligibility ಇವರಿಗೆ ಕಡಿಮೆಯಾಗುತ್ತದೆ, ಅವರಿಗೆ ಅದು ಜಾಸ್ತಿಯಾಗುತ್ತದೆ. It is a transition period. We are trying hard how to accommodate ಅಂತ. Actually ನಾವು last leg ನಲ್ಲಿದ್ದೇವೆ. ನಮ್ಮದು 5th year complete ಆಗಿಬಿಟ್ಟಿದೆ. It is a big problem, I admit it. ಆದ್ದರಿಂದ ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದನ್ನು ಯಾವ ರೀತಿಯಾಗಿ ಸರಿಪಡಿಸಬೇಕು, ಆದರೆ ಇದನ್ನು ಸರಿಪಡಿಸಲೇಬೇಕಾಗಿದೆ. ಈ Transitionನಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

SRI H.K.KUMARSWAMY:– But at present this policy is not in force.

ಉಪಾಧ್ಯಕ್ಷರು:– ವಾರ್ತಾ, ಯುವಜನ ಸೇವೆ ಮತ್ತು ಮೀನುಗಾರಿಕೆ ಸಚಿವರೆ ತಾವು ಮಾತನಾಡಿ.

ಇ) ಯುವಜನ ಸೇವೆಗಳ ಬೇಡಿಕೆಗೆ ಮಾನ್ಯ ಸಚಿವರ ಉತ್ತರ:

ಶ್ರೀ ಅಭಯಚಂದ್ರ(ಮಾನ್ಯ ಯುವಜನ ಸೇವೆ ಹಾಗೂ ಮೀನುಗಾರಿಕೆ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಒಳ್ಳೆಯ ಸಲಹೆಯನ್ನು ಕೊಟ್ಟು ಸಂಚಲನವನ್ನು ಹುಟ್ಟಿಸಿದ್ದಾರೆ. ಅವರಿಗೆ ನಾನು ಅಭಿನಂದಿಸುತ್ತೇನೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ನವರ ಸರ್ಕಾರವು ಹೊಸದಾಗಿ ಆರಂಭಿಸಿದ ಅನುಷ್ಠಾನಗೊಳಿಸಿರುವ ಪ್ರಮುಖ ಕಾರ್ಯಕ್ರಮಗಳು '2013–14ನೇ ಸಾಲಿನಲಿ ನಮ್ಮೂರ ಶಾಲೆಗಳಿಗೆ ನಮ್ಮೂರ ಯುವಜನರು' ಎಂಬ ಸ್ಕೀಮ್ ತಂದಿದ್ದೇವೆ. ಅದೇ ರೀತಿಯಾಗಿ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ವಿನಾಯಿತಿಯನ್ನು ಕೊಡಬೇಕೆನ್ನುವ ಕಲ್ಪನೆ ತಂದಿದ್ದೇವೆ. ಅದೇ ರೀತಿಯಾಗಿ

ಪ್ರಥಮ ಕುಟುಂಬ ಸದಾ ಯೋಜನೆ ಕಾರ್ಯಕ್ರಮವನ್ನು ನಿಮ್ಹಾನ್ಸ್ ಸಹಯೋಗದಿಂದ ಯುವಜನರಿಗೆ ಮತ್ತು ಹದಿಹರೆಯದ ಯುವಜನರಿಗೆ ಕುಟುಂಬದ ಹಿರಿಯರಿಗೆ ಆಪ್ತ ಸಮಾಲೋಚನೆಯ ಸೌಲಭ್ಯವನ್ನು ಒದಗಿಸಲು ಯುವಜನರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಅದೇ ರೀತಿಯಾಗಿ ಗ್ರಾಮೀಣ ಕ್ರೀಡಾ ಉತ್ಸವವನ್ನು ನಡೆಸಲು ಯುವಶಕ್ತಿ ಕೇಂದ್ರವು ಪ್ರಾರಂಭವಾಗಿದೆ. ಕ್ರೀಡಾಸಾಧನೆ ಮಾಡಿದವರಿಗೆ ನಗದು ಪುರಸ್ಕಾರವು ಆಗುತ್ತಿದೆ. ಮಾಸಾಶನದಲ್ಲಿ ಹೆಚ್ಚಳವನ್ನು ಮಾಡಿದ್ದೇವೆ. ಗರಡಿ ಮನೆಗಳ ಪುನರ್ ನಿರ್ಮಾಣ ಮಾಡುತ್ತಿದ್ದೇವೆ. ಕರ್ನಾಟಕ ಕ್ರೀಡಾಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 91 ಜನ coachಗಳಿಗೆ ಶೇಕಡಾ 20% ವೇತನವನ್ನು ಹೆಚ್ಚಿಸಲಾಗಿದೆ. ಮೊದಲು ಕೋಚ್‌ಗಳಿಗೆ ಸರಿಯಾದಂತಹ ವೇತನಗಳು ಇರಲಿಲ್ಲ. ಅವರಿಗೆ 20% increase ಅನ್ನು ಮಾಡಿದ್ದೇವೆ. ಇವತ್ತು ನಮ್ಮ ಇಲಾಖೆಯಲ್ಲಿ Total budget 118 ಕೋಟಿ ರೂಪಾಯಿಗಳಿವೆ. ಅದರಲ್ಲಿ ಏನಾದರೂ ಅಭಿವೃದ್ಧಿ ಮಾಡುವುದಕ್ಕೆ ಅಂದರೆ ಕೇವಲ 11 ಕೋಟಿ ರೂಪಾಯಿಗಳಲ್ಲಿ ಮಾತ್ರ ಅಭಿವೃದ್ಧಿ ಮಾಡುವುದಕ್ಕೆ ಇದೆ. ಪ್ರಗತಿಯಲ್ಲಿರುವಂತಹ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸುಮಾರು 70 ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ. ಅದಕ್ಕಾಗಿ ಮುಂದಿನ ಬಜೆಟ್‌ನಲ್ಲಿ ಕನಿಷ್ಠ 150 ಕೋಟಿ ರೂಪಾಯಿಗಳನ್ನಾದರೂ ಮಂಜೂರು ಮಾಡಿದರೆ ಎಲ್ಲಾ ಶಾಸಕರನ್ನು ಸ್ವಲ್ಪ ಸಮಾಧಾನಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನಮ್ಮ ಎಲ್ಲಾ ಶಾಸಕರು ಬಂದು ಯುವಜನ ಖಾತೆ ಎಂದರೆ ಅದರಲ್ಲಿ ಬಹಳ ಹಣವಿರಬಹುದು. ನಾವು ಕೇಳುವ 1.50 ಲಕ್ಷ ರೂಪಾಯಿಗಳ ಅನುದಾನವನ್ನು ಕೂಡಲೇ ಕೊಡಲಿಕ್ಕೆ ಸಾಧ್ಯವೆಂಬ ಭಾವನೆ ನಮ್ಮ ಹೊಸ ಶಾಸಕರಲ್ಲಿ ಇದೆ. ಆದರೆ ಇಲ್ಲಿ ಏನಾಗಿದೆ, ನಮ್ಮಲ್ಲಿರುವ ಬಜೆಟ್‌ನಲ್ಲಿ ಹೆಚ್ಚಿನ ಹಣ ಇವತ್ತು ಸಂಬಳಕ್ಕೆ ಹೋಗುತ್ತದೆ. ಬೇರೆ ಬೇರೆ ಯೋಜನೆಗಳಿಗೆ ಹೋಗುತ್ತಿದೆ.

ಶ್ರೀ ವೈ.ಎಸ್.ವಿ.ದತ್ತಾ:– ಈಗ ಹಣವನ್ನು sanction ನಾವು ಮಾಡುವುದಿದ್ದರೆ 200 ಕೋಟಿ ರೂಪಾಯಿಗಳನ್ನು sanction ಮಾಡಿಬಿಡುತ್ತೇವೆ.

ಶ್ರೀ ಅಭಯಚಂದ್ರ ಜೈನ್:– ನಮ್ಮದು ಸಮಗ್ರವಾಗಿ ಚರ್ಚೆಯಾಗಲಿಕ್ಕೆ ಅವಕಾಶ ಆಗಲಿಲ್ಲ. ನಿನ್ನೆ ನಮ್ಮ ಪುಟ್ಟಣ್ಣಯ್ಯನವರು ಮಾತ್ರ ಮುಖ್ಯಮಂತ್ರಿಯವರು ಇರುವಾಗಲೇ ಬಹಳ ಖಾರವಾಗಿ ಮಾತನಾಡಿದ್ದಾರೆ. ಒಲಿಂಪಿಕ್ಸ್‌ಗೆ ನಾವು 200 ಜನರನ್ನಾದರೂ ಕರ್ನಾಟಕದಿಂದ ಸಿದ್ಧಪಡಿಸಿ ಕಳುಹಿಸಬೇಕು, ಆ ರೀತಿ ಕರ್ನಾಟಕ ಸಿದ್ಧವಾಗಬೇಕು, Sports ಇಲಾಖೆಗೆ ಕಾಯಕಲ್ಪ ಕೊಡಬೇಕು ಎಂಬ ಎಲ್ಲಾ ಸಂದೇಶಗಳನ್ನು ಜಿಮ್ ಬೇಕು. ನಮ್ಮ ಕ್ಷೇತ್ರದಲ್ಲಿ ನಮಗೆ sports complex ಬೇಕು. ಅಲ್ಲಿ stadium ಮಾಡಿಕೊಡಬೇಕು. ಅಲ್ಲಿ ಸೀಮಿತವಾಗಿರುವಂಥ ಹಣವಿರುವುದರಿಂದ ಅದನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಇದು ಹಿಂದಿನಿಂದ ನಡೆದುಕೊಂಡ ಬಂದದ್ದು. ಆದರೆ ನಮ್ಮ ಎಲ್ಲಾ ಶಾಸಕರ ಸಹಕಾರದಿಂದ ಆಗಬಹುದು.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಸುಮ್ಮನಿರಲಾರದೆ ಹಿಂದೆ ಯಾರೋ ತೆಗೆದು ಕ್ರೀಡಾಂಗಣ ಎಂದು ಮಾಡಿದ್ದೀರಿ, ಅದರ ಪಕ್ಕದಲ್ಲಿ MSIL ಅನ್ನು open ಮಾಡಿದ್ದೀರಿ, ಏನಾಗಿವೆ ಅವೆಲ್ಲಾ open bar ಗಳಾಗಿವೆ. ಅಲ್ಲಿ ಹೊಡೆದಾಡಿ, ಬಾಟಲ್‌ಗಳನ್ನು ತೆಗೆದುಕೊಂಡು ಚಚ್ಚಾಡಿ, ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಆಗುತ್ತಿದೆ. At least ಕೊನೆಗೆ ಅದರೊಳಗೆ ಯಾರೂ ಹೋಗಲಿಕ್ಕಾದಂತೆ ಒಂದು ಬೀಗವನ್ನಾದರೂ ಹಾಕುವಂತೆ ಮಾಡಿ, ಆಮೇಲೆ ಏನಾದರೂ ಆಗಲಿ.

ಶ್ರೀ ಅಭಯಚಂದ್ರ ಜೈನ್:– ತಾವು ಈ ವಿಷಯವನ್ನು ಮೊನ್ನೆ ಸದನದಲ್ಲಿ ಮಾತನಾಡಿದ್ದೀರಿ, ಅದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಭರವಸೆಯನ್ನು ಸದನದಲ್ಲಿ ಕೊಟ್ಟಿದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ನಿಮಗೆ ಕೊಟ್ಟಿರುವ ಅನುದಾನ 11.00 ಕೋಟಿ ರೂಪಾಯಿಗಳಲ್ಲಿ 20.00 ಕೋಟಿ ರೂಪಾಯಿಗಳ spill over works ಇದ್ದರೆ ನೀವು ಹೊಸ works ಎಲ್ಲಿ ಕೊಡುತ್ತೀರಿ? ಮುಖ್ಯಮಂತ್ರಿಗಳಿಗೆ ಹೇಳಿ,

ಶ್ರೀ ಅಭಯಚಂದ್ರ ಜೈನ್:– ಇರುವ ಹಣದಲ್ಲಿ ಮಾಡಬೇಕು ಏನು ಮಾಡುವುದು? ಈ ಇಲಾಖೆಯಲ್ಲಿರುವಂಥ ವ್ಯವಸ್ಥೆಯಂತೆ ಮಾಡಬೇಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಹಿರಿಯ ಸಚಿವರಾದ ಶ್ರೀ ದೇಶಪಾಂಡೆಯವರು, ಶಿವಕುಮಾರ್‌ರವರು ಎಲ್ಲಾ ಇದ್ದಾರೆ. ಅವರಿಗೆ ಹೇಳಿ, ಈ ಇಲಾಖೆ ಈ ದೇಶಕ್ಕೆ ಒಂದು strength. ಪುಟ್ಟಣ್ಣಯ್ಯನವರು ಮಾತನಡುವಾಗ ನಾವು ಮಾತನಾಡಬೇಕೆಂದಿದ್ದೆವು. ಆದರೆ ನಮಗೆ ಮಾತನಾಡಲಿಕ್ಕೆ ಆಗಲಿಲ್ಲ. ಕ್ರೀಡೆಯನ್ನು ಕಡೆಗಾಣಿಸಿದರೆ ಯುವಶಕ್ತಿಯನ್ನು ಕಡೆಗಾಣಿಸಿದಂತೆ. ಯುವಶಕ್ತಿಯನ್ನು ಏನಾದರೂ ಶಿಸ್ತು, ಸಂಯಮ, ಆರೋಗ್ಯಕರವಾಗಿ ಇಡಬೇಕೆಂದರೆ ಕ್ರೀಡೆಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ಏನೋ ಕ್ರೀಡೆ ಎಂದರೆ ಒಂದು ತರಹ ತಾತ್ಸಾರ ಎಂದು ನೋಡಿ ಆ School Masters ಅನ್ನು ವಾರ್ಷಿಕ ಕ್ರೀಡೆ ಮಾಡಿ ಎಂದು ವರ್ಷಕ್ಕೊಂದು ಸಾರಿ ಕಳುಹಿಸುತ್ತೀರಿ. ಅವರಿಗೆ ಎಷ್ಟು ಹಣ ಕೊಡುತ್ತೀರಿ? 5,000/–, 3,000/– ಕೊಡುತ್ತೀರಿ. ಏನು prize ಕೊಡಲಿಕ್ಕಾಗುತ್ತದೆಯೇ? ನಾವು ಕ್ರೀಡೆ ಮಾಡುತ್ತೇವೆ ದುಡ್ಡು ಕೊಡಿ, ದುಡ್ಡು ಕೊಡಿ ಎಂದು ಬೀದಿ, ಬೀದಿಯಲ್ಲೆಲ್ಲಾ ಅಲೆಯುತ್ತಾರೆ, ಆ ರೀತಿ ಏಕೆ ಮಾಡುತ್ತೀರಿ?

ಶ್ರೀ ಅಭಯಚಂದ್ರ ಜೈನ್:– ಈಗ ಉತ್ತರ ಕೊಡುತ್ತೇನೆ, ನೀವು ಮತ್ತೆ ಮಾತನಾಡಿ. ಇವತ್ತು ನಮ್ಮ ಇಲಾಖೆಗೆ ಪೂರಕವಾಗಿ Higher Education, Primary Education ಎಲ್ಲರೂ ಕೂಡ ಸಂಯೋಜನೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ ಇವತ್ತು ಕಾಲೇಜಿನಲ್ಲಿ ಕೂಡ sports activities ಇದೆ. Primary ಯಲ್ಲಿ ಕೂಡ sports activities ಇದೆ. ಆದರೆ Physical Directors shortage ಇದೆ. ಎಲ್ಲಾ ಕಾಲೇಜುಗಳಲ್ಲಿ Physical Directors ಇಲ್ಲ, ಅಂತಹ ಕುಂದುಕೊರತೆಗಳಿವೆ. ಇವತ್ತು ನಮ್ಮ ಕ್ರೀಡಾಂಗಣಗಳಿವೆ, stadiums ಇವೆ. ಇವತ್ತು ಜಿಲ್ಲಾ ಕ್ರೀಡಾಂಗಣಗಳಿವೆ.

ಆದರೆ ಅಲ್ಲಿರುವವರು ಯಾರು? ಎಲ್ಲಾ clerks ಆಗಿ ಬಂದು promotion ಆದವರು ಅಲ್ಲಿ Deputy Directors ಆಗಿರುವವರು ಇದ್ದಾರೆ. ಅದೇರೀತಿ ಎಲ್ಲಾ ಕಡೆ, ಇವತ್ತು ಮಂಗಳೂರಿನಲ್ಲಿರಬಹುದು, ಚಿಕ್ಕಮಗಳೂರಿನಲ್ಲಿರಬಹುದು, ನಾನು ನಮ್ಮ Higher Education Minister ರವರ ಹತ್ತಿರ ಕೇಳಿಕೊಂಡು ಮಂಗಳೂರಿನಲ್ಲಿ ಪ್ರಾಯೋಗಿಕವಾಗಿ ನಮ್ಮ ಒಂದು ಡಿಗ್ರಿ ಕಾಲೇಜಿನಲ್ಲಿ MPED ಆದವರು ಒಬ್ಬರು Physical Director ಇದ್ದರು. ಅವರನ್ನು ಆ ಕಾಲೇಜಿನಲ್ಲಿ ಕೂಡ ಕೆಲಸ ಮಾಡುತ್ತಾರೆ. ಹೆಚ್ಚುವರಿಯಾಗಿ ನಮ್ಮ ಸ್ಟೇಡಿಯಂಗೆ Physical Director ಆಗಿ ನೇಮಿಸುವಂಥ ಕೆಲಸ ಉಡುಪಿಯಲ್ಲಿ ಮಾಡಿದ್ದೇವೆ. ಇವತ್ತು ಆ Physical Director ಬಹಳ ಉತ್ತಮವಾದಂಥ ಸೇವೆಯನ್ನು ಮಾಡುತ್ತಿದ್ದಾರೆ. ಅವರಿಗೆ ಕ್ರೀಡೆಗಳ ಬಗ್ಗೆ ಬಹಳ ಆಸಕ್ತಿ ಇದೆ. Clerk ಕೆಲಸ ಮಾಡಿಕೊಂಡಿದ್ದವರಿಗೆ promotion ಕೊಟ್ಟು Deputy Director ಮಾಡಿದರೆ ಅವರಿಗೆ sports ಬಗ್ಗೆ ಎಲ್ಲಿ ಆಸಕ್ತಿ ಇರುತ್ತದೆ? ಹಾಗಾಗಿ ನಮ್ಮ ಇಲಾಖೆಯಲ್ಲಿ ಬಹಳಷ್ಟು ನ್ಯೂನತೆಗಳಿವೆ. ಇವತ್ತು ಅದೇರೀತಿ ಮಂಗಳೂರಿನಲ್ಲಿಯೂ ಕೂಡ Deputy Director ಇಲ್ಲ. ಅಲ್ಲಿ ಕೂಡ ಅದೇ ರೀತಿ ನಮ್ಮ ಡಿಗ್ರಿ ಕಾಲೇಜಿನಲ್ಲಿ MPED ಆದವರೊಬ್ಬರು Physical Director ಅನ್ನು ಅಲ್ಲಿಗೂ ಕೂಡ ಇವತ್ತು ಪ್ರಾಯೋಗಿಕವಾಗಿ ಮಾಡಿ ಹೆಚ್ಚುವರಿ ಹೊಣೆಯನ್ನು ಕೊಡುವಂಥ ಕೆಲಸ ಮಾಡಿದ್ದೇವೆ. ಇಡೀ ರಾಜ್ಯದಲ್ಲಿ ನಾವು ಮುಂದಿನ ದಿನಗಳಲ್ಲಿ MPED ಆದವರನ್ನೇ ಜಿಲ್ಲಾ ಕ್ರೀಡಾಂಗಣಕ್ಕೆ Deputy Director ಆಗಿ ಮಾಡಿದಾಗ ಅಲ್ಲಿ sports activities ಗೆ ಹೆಚ್ಚಿನ ಉತ್ತೇಜನ ಬರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಇಚ್ಛಿಸುತ್ತೇನೆ. ನಮ್ಮ ಮುಖ್ಯಮಂತ್ರಿಗಳು ಕ್ರೀಡೆಗಳಿಗೆ ಹೆಚ್ಚಿನ ಒಂದು ಪ್ರೋತ್ಸಾಹ ಕೊಡುತ್ತಾರೆ. ಈ ಸಲ ಕೊಡಗಿನಲ್ಲಿ ಕೊಡವ ಸಮಾಜದವರಿಂದ ಒಂದು ತಿಂಗಳು ಹಾಕಿ ಮ್ಯಾಚ್ ನಡೆಯಿತು. 30.00 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಅನುದಾನ ಕೊಡುವಂಥ ಕೆಲಸ ಆಗಿದೆ. ಇವತ್ತು ಮೈಸೂರಿನಲ್ಲಿ ಹಾಕಿ ಫೆಡರೇಷನ್‌ನವರು ಹಾಕಿ ಕ್ರೀಡೆ ಆಡಲಿಕ್ಕೆ ಅವರಿಗೂ ಸಹ 10.00 ಲಕ್ಷ ರೂಪಾಯಿಗಳ ಅನುದಾನವನ್ನು ಕರ್ನಾಟಕ ಸರ್ಕಾರದಿಂದ ಹೆಚ್ಚುವರಿಯಾಗಿ ಕೊಡುವಂತಹ ಕೆಲಸ ಆಗಿದೆ.

ಹಾಗಾಗಿ ಮುಂದಿನ ದಿನಗಳಲ್ಲಿ ಈ ಇಲಾಖೆಗೆ ಹೆಚ್ಚಿನ ಅನುದಾನವನ್ನು ಒದಗಿಸಿದಾಗ ಹೆಚ್ಚು effective ಆಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಲ್ಲಿ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಹೆಚ್ಚಿನ ಶಾಸಕರಿಗೆ ಇದರಲ್ಲಿ ಭಾಗವಹಿಸಬೇಕೆಂಬ ಆಸೆ ಇತ್ತು. ನಮ್ಮ ಎಲ್ಲಾ ಶಾಸಕರು ಬಂದು ಕೇಳುತ್ತಾರೆ. ಜಿಮ್ ಕೊಡಬೇಕು, ಗರಡಿ ಮನೆಯನ್ನು ಕೊಡಬೇಕು, ಸ್ಟೇಡಿಯಂ ಮಾಡಿಕೊಡಬೇಕು. ಹೊಸ ಶಾಸಕರು ಸಹ ನನ್ನ ಕ್ಷೇತ್ರಕ್ಕೂ ಸಹ ಹೊಸ ಸ್ಟೇಡಿಯಂ ಆಗಬೇಕೆಂದು ತಮ್ಮ ಆಸೆ, ಭಾವನೆಗಳನ್ನು ಇಟ್ಟುಕೊಂಡಿದ್ದಾರೆ. ಆದರೆ ಇಲ್ಲಿರುವ ಸೀಮಿತ ಅನುದಾನದಿಂದಾಗಿ ಹೆಚ್ಚು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಅದೇರೀತಿ ನನ್ನ ಕ್ಷೇತ್ರ ಮೂಡಬಿದಿರೆಯಲ್ಲಿ 30,000 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮೂರು ಇಂಜಿನಿಯರಿಂಗ್ ಕಾಲೇಜಗಳು ಪ್ರತಿಷ್ಠಿತ ಆಳ್ವಾಸ್ ಶಿಕ್ಷಣ ಸಂಸ್ಥೆ ಒಂದೇ ಕಾಲೇಜಿನಲ್ಲಿ 20,000 ಮಕ್ಕಳಿದ್ದಾರೆ ಅಲ್ಲಿ 600 ಮಕ್ಕಳಿಗೆ Mr.Alvaರವರು free education, free food, hostel facilities, ಎಲ್ಲವನ್ನೂ ಕೂಡ ಮಾಡುತ್ತಿದ್ದಾರೆ. ಇಂಥ ಮನೋಭಾವನೆಯಿಂದ ಎಲ್ಲ ಶಿಕ್ಷಣ ಸಂಸ್ಥೆಗಳು ಮಾಡಬೇಕು. ಏಕೆಂದರೆ ಎಲ್ಲವನ್ನು ಕೂಡ ಸರ್ಕಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. Private participation is also very important. ಆದ್ದರಿಂದ ಇಂಥ ಚಿಂತನೆ ಮುಂದಿನ ದಿನಗಳಲ್ಲಿ ಆಗಬೇಕು. ಅದಕ್ಕಾಗಿ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ನಮ್ಮ Higher Education ಮಂತ್ರಿಗಳು ಸಹ ಕೈಜೋಡಿಸಿದಾಗ ನಮ್ಮ sports activities ಗೆ ಹೆಚ್ಚಿನ ಕಾಯಕಲ್ಪ ಕೊಡುವಂಥ ಕೆಲಸ ಖಂಡಿತವಾಗಿ ಆಗುತ್ತದೆ. ಡಿಸೆಂಬರ್ ತಿಂಗಳಲ್ಲಿ ರಾಷ್ಟ್ರೀಯ ಮಟ್ಟದ ಕ್ರೀಡಾ ಕೂಟ, Inter University ಇಡೀ ರಾಷ್ಟ್ರದ ಎಲ್ಲಾ universities ಕ್ರೀಡಾಕೂಟವನ್ನು ನಾವು ಮೂಡಬಿದರೆಯಲ್ಲಿ ಸಂಯೋಜನೆ ಮಾಡುತ್ತಿದ್ದೇವೆ. ಆ ರೀತಿ ಕ್ರೀಡೆಗೆ ಉತ್ತೇಜನ ಕೊಡುವಂಥ ಕೆಲಸ ನಮ್ಮ ಇಲಾಖೆಯಿಂದ ಆಗುತ್ತಿದೆ ಎಂಬ ಮಾತುಗಳನ್ನು ಹೇಳಿ ಎಲ್ಲಾ ಮಾತನಾಡಿದ ಸದಸ್ಯರುಗಳಿಗೆ ಪ್ರೋತ್ಸಾಹ ನೀಡಿದಂಥ ಶಾಸಕರುಗಳಿಗೆ ನನ್ನ

ಅಭಿನಂದನೆಗಳನ್ನು ಸಲ್ಲಿಸಿ ಮಾನ್ಯ ಉಪಾಧ್ಯಕ್ಷರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:– ಹಾವೇರಿಯಲ್ಲಿ ಜಿಲ್ಲಾ ಕ್ರೀಡಾಂಗಣ ಇದೆ, ಅಲ್ಲಿ ಯಾರ್ಯಾರೂ ಇಲ್ಲ, ಯಾರೊಬ್ಬ ಅಧಿಕಾರಿಗಳೂ ಇಲ್ಲ. Retired ಆಗಿರುವವರನ್ನು ಇಟ್ಟಿದ್ದಾರೆ. ಮಂತ್ರಿಗಳು ದಯಮಾಡಿ ಅದಕ್ಕೇನಾದರೂ ವ್ಯವಸ್ಥೆ ಮಾಡಬೇಕು. ಅಲ್ಲೆಲ್ಲಾ ಹಾಳು ಬಿದ್ದುಹೋಗಿವೆ, ಅಲ್ಲಿ ನೋಡುವವರೇ ಗತಿ ಇಲ್ಲ ಆ ಪರಿಸ್ಥಿತಿ ಇದೆ. ಅದಕ್ಕೆ ಏನಾದರೂ ವ್ಯವಸ್ಥೆ ಮಾಡುವಿರಾ ಹೇಳಿ.

ಉಪಾಧ್ಯಕ್ಷರು:– ಆಯಿತು, ಚರ್ಚೆ ಮುಕ್ತಾಯವಾಯಿತು.

ಈಗ 2014–15ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಈ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವು ಹೀಗಿದೆ:

"ದಿನಾಂಕ 31ನೇ ಮಾರ್ಚ್ 2015ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 12 ಹಾಗೂ 17ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ ಬೇಡಿಕೆಯ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಸೇರಿದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡುತ್ತದೆ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು)

ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.

ಅಭಿಯಾಚನೆ ಸಂಖ್ಯೆ 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 33841.35 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 29459.77 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಸಂಖ್ಯೆ 17 – ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2062827.04 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 67635.48 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.